ಸಂಯುಕ್ತ ಕರ್ನಾಟಕ

**Friday, January 7th, 2011**

# ಬಹುಮುಖ ಪ್ರತಿಭೆಗಳ ಅನಾವರಣ



ಅಂತಾರಾಷ್ಟ್ರೀಯ ಜೈನ ವಸತಿ ಶಾಲೆ(ಜೆಐಆರ್‌ಎಸ್)ಯಲ್ಲಿ ಹಮ್ಮಿಕೊಂಡಿದ್ದ 11ನೇ ವಾರ್ಷಿಕೋತ್ಸವ ಕಾರ್ಯಕ್ರಮ. ಅದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ, ಆರ್ಟ್ ಅಂಡ್ ಕ್ರಾಫ್ಟ್, ಆರ್ಟ್ ಆಫ್ ಲೀವಿಂಗ್, ರೊಬೋಟಿಕ್, ವಸ್ತು ಪ್ರದರ್ಶನ ಮತ್ತಿತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಜೈನ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಆರ್. ಚೆನ್‌ರಾಜ್ ಜೈನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇವರು ಸೇರಿದಂತೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಐನ್‌ನ ಸಿಇಓ ಕೆ.ಎಲ್. ಗಣೇಶ್ ಶರ್ಮ ಮಕ್ಕಳಿಗೆ ತಮ್ಮ ಭಾಷಣದಲ್ಲಿ ಹಿತನುಡಿಗಳನ್ನಾಡಿದರು. ಉದ್ಘಾಟನೆಗೊಂಡ ನಂತರ ಸುಮಾರು 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳಲ್ಲಿ, 200 ವಿದ್ಯಾರ್ಥಿಗಳು ವಿವಿಧ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಚಲನಚಿತ್ರ ಗೀತೆಗಳಿಗಲ್ಲದೇ, ಜಾನಪದ ಹಾಡುಗಳಿಗೂ ನೃತ್ಯ ಪ್ರದರ್ಶನ ನೀಡಿದ್ದು ಅಲ್ಲಿನ ಮತ್ತೊಂದು ವಿಶೇಷ. ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಇಂದಿನ ಅಗತ್ಯವನ್ನು ಮನಗಂಡು ಆ ಕುರಿತು ನೃತ್ಯ ರೂಪಕಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸದರು.

ಹಾಡು ಮತ್ತು ನೃತ್ಯ ರೂಪಕಗಳಿಗೆ ಹೊಂದುವಂತೆ ಸಮವಸ್ತ್ರಗಳನ್ನು ಧರಿಸಿ, ಅಲಂಕಾರಗೊಂಡಿದ್ದ ವಿದ್ಯಾರ್ಥಿಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ನೆರೆದಿದ್ದ ಪೋಷಕರು, ಶಾಲೆಯ ಸಿಬ್ಬಂದಿ ಮತ್ತು ಪ್ರೇಕ್ಷಕರಲ್ಲಿ ಸಂತಸ ಮನೆಮಾಡಿತ್ತು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗಷ್ಟೇ ಸೀಮಿತವಾಗದ ಈ ವಾರ್ಷಿಕೋತ್ಸವದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತಿತರ ಕ್ಷೇತ್ರಗಳಿಗೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ವಿದ್ಯಾರ್ಥಿಗಳು, ತಮ್ಮ ಮನೆಯಿಂದಲೇ ಅನೇಕ ವಸ್ತುಗಳನ್ನು ತಯಾರಿಸಿಕೊಂಡು ಬಂದು ಪ್ರದರ್ಶನಕ್ಕಿರಿಸಿದ್ದರಲ್ಲದೇ, ಆ ಕುರಿತು ವೀಕ್ಷಣೆಗೆಂದು ಬರುವವರಿಗೆ ವಿವರಿಸುತ್ತಿದ್ದರು. ವಿದ್ಯಾರ್ಥಿಗಳ ಹೊಂದಿದ್ದ ಅಪಾರ ಜ್ಞಾನಕ್ಕೆ ಎಲ್ಲರೂ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದದ್ದು ಸಮಾನ್ಯವಾಗಿತ್ತು.

ವಿದ್ಯಾರ್ಥಿಗಳಲ್ಲಿನ ಪ್ರತಿಭೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಸಾಂಸ್ಕೃತಿಕ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದವರಿಗೆ ಡಾ. ಆರ್. ಚೆನ್‌ರಾಜ್ ಜೈನ್ ಪ್ರಶಸ್ತಿ ಪ್ರದಾನ ಮಾಡಿದರು.